# ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ.

## ಸಿ.ಸಿ ನಂಃ 672/2020

| | | |
|---|---|---|
| ಸಾಕ್ಷಿಯ ಹೆಸರಃ | ಶಾಂತಪ್ಪ | ಪ್ರಾಸಾಃ **09** |
| ತಂದೆ/ಗಂಡನ ಹೆಸರುಃ | ರಾಮಚಂದ್ರಪ್ಪ | ಚಾಸಾಃ **13** |
| ವಯಸ್ಸುಃ | **48 ವರ್ಷ** | ದಿಃ **11.02.2025** |
| ಉದ್ಯೋಗಃ | **AEE** | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕಲುಬುರಗಿ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 2016 ರಿಂದ 2022 ರವರೆಗೆ ಶಹಪೂರದ GESCOM ನಲ್ಲಿ AEE ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06.06.2020 ರಂದು ಸದರಿ ಪ್ರಕರಣದಲ್ಲಿ ಗೋಗಿ ಪೋಲಿಸ್ ಠಾಣೆಯಿಂದ ಚಾಸಾ.1, 9 ಮತ್ತು 10 ರವರು ಕರ್ತವ್ಯದಲ್ಲಿ ಹಾಜರಾತಿ ಇದ್ದ ಬಗ್ಗೆ ದಿನಾಂಕ 28.03.2020 ಮತ್ತು 11.04.2020 ರ ಹಾಜರಾತಿಯನ್ನು ಕೇಳಿದ್ದು ಸದರಿ ಪೊಲಿಸನವರು ತಿಳಿಸಿದ್ದಂತೆ ಚಾಸಾ.1, 9 ಮತ್ತು 10 ರವರ ಆ ದಿವಸದ ಕರ್ತವ್ಯದ ಹಾಜರಾತಿಯನ್ನು ನೀಡಿರುತ್ತೇನೆ. ದಿನಾಂಕ 08.07.2020 ರಂದು ಘಟನೆಯ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ದಿನಾಂಕ 07.07.2020 ರ ವರದಿಯನ್ನು ನಿಪಿ-5 ಎಂದು ಅದರಲ್ಲಿರುವ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ವಾಯ್.ಎಸ್. ವಕೀಲರಿಂದಃ**

ಪೋಲಿಸರು ನನಗೆ ಚಾಸಾ.1, 9 ಮತ್ತು 10 ರವರು ಹಾಜರಾತಿಯನ್ನು ನೀಡುವಂತೆ ಲಿಖಿತವಾಗಿ ಮಾಹಿತಿಯನ್ನು ಕೇಳಿರುತ್ತಾರೆ. ಚಾಸಾ.1 ಮತ್ತು 9 ರವರು ವನದುರ್ಗ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಚಾಸಾ.1 ಮತ್ತು 9 ರವರಿಗೆ ಸಂಬಂಧಿಸಿದಂತೆ ಅಲ್ಲಿಯ ಶಾಖಾಧಿಕಾರಿಗಳು ಹಾಜರಾತಿಯನ್ನು ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಚಾಸಾ.1 ರವರು ಕರ್ತವದಲ್ಲಿ ಇರುವ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ.

ನಾನು ವನದುರ್ಗ ಶಾಖಾಧಿಕಾರಿಯಿಂದ ಮೌಖಿಕವಾಗಿ ಮಾಹಿತಿಯನ್ನು ಪಡೆದುಕೊಂಡಿರುತ್ತೆನೆ. ನಾನು ಹಾಜರಾತಿಗೆ ಸಂಬಂಧಿಸಿದಂತೆ ಪೋಲಿಸರಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ. ನಾನು ಪೋಲಿಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಾಹಾಪೂರ.**

Accused No.1 to 3 are present. Issue witness summons

CW-3,7, 8, 12, 18.

Call on: 05.03.2025